

# ಹಸುರು ತೋರಣ ಮರಗಳಿಗೆ ಆಭರಣ

**ಮರಗಳಿಗೆ ಹಬ್ಬುವ ಹಾವಸೆ, ರಕ್ಷಣಾಕವಚವಾಗಿ ಕೆಲಸ ಮಾಡುತ್ತದೆ. ಮಣ್ಣು ಸೇರಿ ಗೊಬ್ಬರವಾಗುತ್ತದೆ.**

■ ರಾಜು ಎಲ್‌. ಎಸ್‌.

ಪೂರ್ಣಚಂದ್ರ ತೇಜಸ್ವಿ ಅವರ ‘ಕರ್ವಾಲೋ’ ಕಾದಂಬರಿಯನ್ನು ಓದುವಾಗ ಸೆಳೆದ ಪದಗಳಲ್ಲೊಂದು ‘ಹಾಸುಂಬೆ’. ಪಶ್ಚಿಮಘಟ್ಟಗಳ ಸೊಬಗನ್ನು ವರ್ಣಿಸುವಾಗ, ಕಾಂಡಗಳಲ್ಲಿ ಉಣ್ಣೆಯಂಥ ಹಸುರು ಹಾಸುಂಬೆ ಹೊದ್ದುಕೊಂಡಿತ್ತು ಎಂದು ತೇಜಸ್ವಿ ಬರೆಯುತ್ತಾರೆ.

ಹಾವಸೆ ಅಥವಾ ಹಾಸುಂಬೆ ಮಲೆನಾಡಿನ ಕಡೆ ಹೆಚ್ಚು ಬಳಕೆಯಾಗುವ ಪದ. ಬಾಲ್ಯದಲ್ಲಿ, ಮಳೆಗಾಲದಲ್ಲಿ ಗೋಡೆಗಳ ಅಂಚಿಗೆ ಸಹಜವಾಗಿ ಬೆಳೆಯುತ್ತಿದ್ದ ತಿಳಿ ಹಸುರು ಬಣ್ಣದ ಹಾಸುಂಬೆ ಗಮನಸೆಳೆಯುತ್ತಿತ್ತು. ಮುಟ್ಟಿದಾಗ ಅದು ಅರಿಶಿನ ಪುಡಿ ರೀತಿ ಬೆರಳಿಗೆ ಅಂಟುತ್ತಿತ್ತು. ಕೀಳಲು ಪ್ರಯತ್ನಿಸಿದರೆ, ಅಜ್ಜ ಬೈಯುತ್ತಿದ್ದ. ‘ಹಾಸುಂಬೆ ಒಂದು ಉತ್ತಮವಾದ ನೈಸರ್ಗಿಕ ಗೊಬ್ಬರ. ಮಳೆಗಾಲದ ನಂತರ, ಬಿಸಿಲು ಹೆಚ್ಚಾಗಿ ಸಹಜವಾಗಿ ಒಣಗಿ ಭೂಮಿಯನ್ನು ಸೇರುತ್ತದೆ. ಅದನ್ನು ನಾವು ಕೀಳಬಾರದು’ ಎನ್ನುತ್ತಿದ್ದರು ಅಜ್ಜ.



ಹಾಸುಂಬೆ, ಮರದ ಕೊಂಬೆಗಳನ್ನು ಆವರಿಸಿಕೊಂಡು ಜೇನುಗೂಡಿನಂತೆ ಜೋತುಗೊಂಡಿರುತ್ತದೆ. ಈ ಹಾಸುಂಬೆ ಎನ್ನುವ ಪಾಚಿ ಪರಾವಲಂಬಿಯಾಗಿದ್ದು, ಇದರಿಂದ ಮರಗಳು ನಿಧಾನವಾಗಿ ಸಾಯುತ್ತವೆ ಎಂದು ನಾನು ಭಾವಿಸಿದ್ದೆ. ಆದರೆ, ನನ್ನ ತಿಳಿವಳಿಕೆ ತಪ್ಪೆಂದು ತಿಳಿಯಲು ಹೆಚ್ಚು ಸಮಯ ಬೇಕಾಗಲಿಲ್ಲ. ಹಾವಸೆಗಳು ಮರದ ಕಾಂಡಗಳಿಗೆ ರಕ್ಷಣೆ ಕೊಡುತ್ತವೆ. ಮರದ ಕಾಂಡಗಳಿಗೆ ಹಬ್ಬಿ, ಬಿಸಿಲಿನ ಹೊಡೆತವನ್ನು ತಗ್ಗಿಸಿ, ತಂಪನ್ನು ಕೊಡುತ್ತವೆ. ಬೇಸಿಗೆಯಲ್ಲಿ ಸುಪ್ತಾವಸ್ಥೆಯಲ್ಲಿ ಬದುಕಿಕೊಂಡು ಮಳೆ ಅಥವಾ ತೇವಾಂಶ ಲಭ್ಯವಾದಾಗ ಮತ್ತೆ ಜೀವಕಳೆ ತುಂಬಿಕೊಳ್ಳುತ್ತವೆ. ಒಣಗಿ ನೆಲ ಸೇರಿದಾಗ, ಮಣ್ಣಿಗೆ ಕಬ್ಬಿಣಾಂಶ, ಸಾರಜನಕ ಸೇರಿಸುತ್ತವೆ. ಅರಣ್ಯದಲ್ಲಿ ಬೀಜಗಳು ಮೊಳಕೆಯಾಗಿ ಸಸ್ಯಗಳಾಗಲು ಸಹಕಾರಿ ಈ ಹಾವಸೆ.

ಈ ಪಾಚಿ ಸಸ್ಯ ವೈಜ್ಞಾನಿಕವಾಗಿ ‘ಟ್ರೆಂಟೆಪೊಹ್ಲಿಯಾ’ ಎನ್ನುವ ಪ್ರಭೇದಕ್ಕೆ ಸೇರಿದ್ದು. ಮರದ ಕಾಂಡಗಳು ಮತ್ತು ಕೊಂಬೆಗಳ ಮೇಲೆ ಎದ್ದುಕಾಣುವ ಕಿತ್ತಳೆ ಪುಡಿಯ ನಿಕ್ಷೇಪವಾಗಿ ಇವು ಕಂಡುಬರುತ್ತವೆ. ಮರಗಳು ಮತ್ತು ಪೊದೆಗಳ ಮೇಲೆ ಬೆಳೆಯುವ ಕಲ್ಲುಹೂವುಗಳು ಸಾಮಾನ್ಯವಾಗಿ ಬೂದು–ಹಸಿರು ಬಣ್ಣವನ್ನು ಹೊಂದಿರುತ್ತವೆ.

ಟ್ರೆಂಟೆಪೊಹ್ಲಿಯಾ ಎಂಬುದು ತಂತುಗಳ ಕ್ಲೋರೊಫೈಟ್ ಹಸಿರು ಪಾಚಿಗಳ ಒಂದು ಕುಲವಾಗಿದ್ದು, ಮರದ ಕಾಂಡಗಳು ಮತ್ತು ಒದ್ದೆಯಾದ ಬಂಡೆಗಳಂತಹ ಭೂಮಿಯ ಬೆಂಬಲದ ಮೇಲೆ ಅಥವಾ ಕಲ್ಲುಹೂವುಗಳಲ್ಲಿ ಸಹಜೀವನದಲ್ಲಿ ಮುಕ್ತವಾಗಿ ವಾಸಿಸುತ್ತದೆ. ಟ್ರೆಂಟೆಪೊಹ್ಲಿಯಾದ ತಂತುಗಳು ಗಾಢ ಕಿತ್ತಳೆ ಬಣ್ಣವನ್ನು ಹೊಂದಿರುತ್ತವೆ.

ಹಾವಸೆಗಳ ಬಣ್ಣ ವಾತಾವರಣದ ಮೇಲೆ ಅವಲಂಬಿಸಿದೆ. ನಮ್ಮ ಪಶ್ಚಿಮಘಟ್ಟಗಳಲ್ಲಿ ಹಸಿರು ಮತ್ತು ಕಿತ್ತಲೆ ಬಣ್ಣದ ಸಮ್ಮಿಶ್ರಣದ ಹಾವಸೆಗಳು ಹೆಚ್ಚಾಗಿದ್ದರೆ, ಶೀತವಲಯದ ಪ್ರದೇಶಗಳಲ್ಲಿ ಹಸಿರು ಮತ್ತು ಬಿಳಿ ಬಣ್ಣದ ಸಮ್ಮಿಶ್ರಣದ ಹಾವಸೆಗಳು ಹೆಚ್ಚು.

ಪ್ರತಿಕ್ರಿಯಿಸಿ: feedback@sudha.co.in